Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 12/2025

ಪ್ರಾ.ಸಾ. 8 ಚಾ.ಸಾ 14

| | | |
|---|---|---|
| ಹೆಸರು | : | ಹುಸೇನಪ್ಪ |
| ತಂದೆಯ ಹೆಸರು | : | ರಾಮಪ್ಪ ಮಡಿವಾಳ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಟ್ರ್ಯಾಕ್ಟರ ಚಾಲಕ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 18-02-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-15 ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇರುತ್ತದೆ. ನನ್ನನ್ನು ಮತ್ತು ಚಾಸಾ-15 ರವರನ್ನು ದಿಃ 09.10.2024 ರಂದು ಗುರುಮಠಕಲ್ ಪೊಲೀಸ ಠಾಣೆಗೆ ಮಧ್ಯಾಹ್ನ 12.30 ಗಂಟೆಗೆ ಕರೆಯಿಸಿದ್ದರು. ಪೊಲೀಸ ಠಾಣೆಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಇದ್ದನು. ಆರೋಪಿಯನ್ನು ವಿಚಾರ ಮಾಡಲಾಗಿ ತಾನು ನರೇಂದ್ರ ಎನ್ನುವ ಬಾಲಕನ್ನು ಕೊಲೆ ಮಾಡಿದ್ದು ನಮ್ಮ ಜೊತೆ ಬಂದರೆ ಕೊಲೆ ಮಾಡಿದ ಸ್ಥಳ ಮತ್ತು ಕೊಲೆ ಮಾಡುವ ಸಮಯದಲ್ಲಿ ತಾನು ಧರಿಸಿದಂತಹ ಬಟ್ಟೆಗಳನ್ನು ತೋರಿಸುವುದಾಗಿ ತಿಳಿಸಿರುತ್ತಾನೆ. ನಾನು ಮತ್ತು ಚಾಸಾ-15 ಹಾಗೂ ಆರೋಪಿ ಮತ್ತು ಪೊಲೀಸರು, ಪೊಲೀಸ ಜೀಪಿನಲ್ಲಿ ಕಾಕಲವಾರ ಗ್ರಾಮಕ್ಕೆ ಚಾಸಾ-27 ಸದಾಶಿವರೆಡ್ಡಿ ಇವರ ಮನೆಗೆ ಕರೆದುಕೊಂಡು ಹೋದಾಗ ಮಧ್ಯಾಹ್ನ 1.30 ಗಂಟೆ ಆಗಿತ್ತು. ಇದೇ ಕೊಲೆ ಮಾಡಿದ ಸ್ಥಳವೆಂದು ತೋರಿಸಿದ್ದು ಆ ಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದು, ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಆ ಕಾಲಕ್ಕೆ ಕರಡು ನಕಾಶೆ ತಯಾರಿಸಿದ್ದು ಮತ್ತು ಒಟ್ಟು 8 ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.43** ಎಂದು ಸಾಕ್ಷಿದಾರರ ಸಹಿಯನ್ನು ನಿ**.ಪಿ.43(ಎ)** ಎಂದು ಗುರುತಿಸಲಾಯಿತು. ಕರಡು ನಕಾಶೆಯನ್ನು **ನಿ.ಪಿ.44** ಎಂದು ಸಾಕ್ಷಿದಾರರ

ಸಹಿಯನ್ನು **ನಿ.ಪಿ.44(ಎ)** ಎಂದು ಗುರುತಿಸಲಾಯಿತು. ಒಟ್ಟು ಎಂಟು ಭಾವಚಿತ್ರಗಳನ್ನು **ನಿ.ಪಿ.45 ರಿಂದ 52** ಎಂದು ಗುರುತಿಸಲಾಯಿತು.

2. ಆರೋಪಿ ತಾನು ಕೊಲೆ ಮಾಡುವ ಸಮಯದಲ್ಲಿ ಧರಿಸಿದಂತಹ ಬಟ್ಟೆಗಳನ್ನು ತನ್ನ ಮನೆಯಲ್ಲಿ ಇಟ್ಟಿದ್ದಾಗಿ ಹೇಳಿದ್ದು ಅದರಂತೆ ನಮ್ಮನ್ನು ಆರೋಪಿತನ ಮನೆಗೆ ಕರೆದುಕೊಂಡು ಹೋಗಿದ್ದು, ಆರೋಪಿ ತನ್ನ ಮನೆಯಿಂದ ಪಡಶಾಲೆಯಲ್ಲಿ ಬಟ್ಟೆಗಳನ್ನು ಹಾಜರುಪಡಿಸಿದನು. ಪ್ಲಾಸ್ಟಿಕ ಕವರನಲ್ಲಿ ಸೀಲ ಮಾಡಿದಂತಹ ನ್ಯಾಯಾಲಯದ ಅನುಮತಿಯೊಂದಿಗೆ ತೆರೆದು ಸಾಕ್ಷಿಗೆ ತೋರಿಸಿಲಾಗಿದ್ದು ಅಂಗಿಯನ್ನು ತೋರಿಸಿದ್ದು ಅದನ್ನು **ಮು.ಮಾ.6** ಎಂದು ಗುರುತಿಸಲಾಯಿತು. ಪ್ಲಾಸ್ಟಿಕ ಕವರನಲ್ಲಿ ಸೀಲ ಮಾಡಿದಂತಹ ನ್ಯಾಯಾಲಯದ ಅನುಮತಿಯೊಂದಿಗೆ ತೆರೆದು ಸಾಕ್ಷಿಗೆ ತೋರಿಸಿಲಾಗಿದ್ದು ಪ್ಯಾಂಟ ತೋರಿಸಿದ್ದು ಅದನ್ನು **ಮು.ಮಾ.7** ಎಂದು ಗುರುತಿಸಲಾಯಿತು. ಪ್ಲಾಸ್ಟಿಕ ಕವರನಲ್ಲಿ ಸೀಲ ಮಾಡಿದಂತಹ ನ್ಯಾಯಾಲಯದ ಅನುಮತಿಯೊಂದಿಗೆ ತೆರೆದು ಸಾಕ್ಷಿಗೆ ತೋರಿಸಿಲಾಗಿದ್ದು ಅಂಡರವೇರ್ ತೋರಿಸಿದ್ದು ಅದನ್ನು **ಮು.ಮಾ.8** ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ಪೊಲೀಸರು ಇವುಗಳನ್ನು ಜಪ್ತಿಪಡಿಸಿಕೊಂಡಿದ್ದು, ಸ್ಥಳದಲ್ಲಿ ಜಪ್ತಿ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿದಾರರು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.53** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.53(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಐದು ಭಾವಚಿತ್ರಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು **ನಿ.ಪಿ.54 ರಿಂದ 58** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

- ಆರೋಪಿ ಪರ ವಕೀಲರು ಗೈರು ಹಾಜರು ಇದ್ದು, ಪಾಟೀ ಸವಾಲಿಗಾಗಿ ಮುಂದುಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ.